**ಅಸಲು ದಾವ ಸಂಖ್ಯೆಃ 479/2021**
**ಪಿ.ಡಬ್ಲೂ -1**

**ದಿಃ 06-08-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು 2 ರಿಂದ 4ನೇ ಪ್ರತಿವಾದಿ ಪರ ವಕೀಲರಾದ ಶ್ರೀ MDP ರವರಿಂದಃ-**

1. ಸರ್ವೆ ನಂಬರ 69/2 ರಲ್ಲಿ ಒಟ್ಟು 36 ಗುಂಟೆ 16 ಆಣಾ ಜಾಗ ಇರುತ್ತದೆ. ಸದರಿ ಜಮೀನಿನ ಚೆಕ್ಕುಬಂದಿಯನ್ನು ನನಗೆ ಹೇಳಲು ಬರುವುದಿಲ್ಲ. ಸದರಿ ಜಮೀನಿನ ಕಬ್ಜೆಯಲ್ಲಿ ಈಗ 2 ಮತ್ತು 3ನೇ ಪ್ರತಿವಾದಿ ಹಾಗೂ 4ನೇ ಪ್ರತಿವಾದಿಯ ವಾರಸುದಾರರು ಇರುತ್ತಾರೆ. ಸದರಿ ಜಮೀನು ಕೆ ಕೆ ಕೊಪ್ಪ ಹಾಗೂ ಕಮಕಾರಟ್ಟಿ ಗ್ರಾಮಗಳ ನಡುವೆ ಬರುತ್ತದೆ. ಸದರಿ ಜಮೀನು ಯಾವ ಊರಿನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ 19/2 ರಲ್ಲಿ ಒಟ್ಟು 2 ಗುಂಟೆ 4 ಆಣಾ ಜಮೀನು ಇರುತ್ತದೆ. ಸದರಿ ಜಮೀನಿನ ಕಬ್ಜೆಯಲ್ಲಿ ನಾನು ಈಗ ಇರುವುದಿಲ್ಲ.

2. ನನ್ನ ಪತಿ 2017 ನೇ ಇಸವಿಯಲ್ಲಿ ಮರಣಹೊಂದಿರುತ್ತಾರೆ ಹಾಗೂ ಅವರು ಸದರಿ ಜಮೀನಿನ ಕಬ್ಜೆಯಲ್ಲಿ ಇದ್ದರು. ಸದರಿ ಜಮೀನಿನ ಕಬ್ಜೆಯಲ್ಲಿ ಈಗ 3ನೇ ಪ್ರತಿವಾದಿ ಇರುತ್ತಾರೆ. ನಾನು ಸದರಿ ಜಮೀನಿಗೆ ನನ್ನ ಪತಿ ಬದುಕಿದ್ದಾಗ ಹೋಗುತ್ತಿದ್ದೆ. ಮನೆ ನಂಬರ 819 ರ ಸ್ವತ್ತು ಯಾವ ಸರ್ವೆ ನಂಬರನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಜಿ.ಪಿ ನಂಬರ 819 ರ ಸ್ವತ್ತನ್ನು ನನ್ನ ಪತಿ ಹಾಗೂ ಅವರ ಸಹೋದರರು ಸೇರಿ ಖರೀದಿ ಮಾಡಿರುತ್ತಾರೆ. ಜಿ ಪಿ ನಂಬರ 819 ರಲ್ಲಿ ಮನೆ ಕಟ್ಟಲು ಯಾರು ಯಾರು ಎಷ್ಟು ಹಣ ಕೊಟ್ಟಿದ್ದರು ಎಂದರೆ ಸಾಕ್ಷಿ ಸದರಿ ಜಾಗದಲ್ಲಿ ಭಾಗ ಮಾಡಿಕೊಂಡು ಅವರವರ ಜಾಗದಲ್ಲಿ ಅವರು ಮನೆ ಕಟ್ಟಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಭಾಗ ಮಾಡಿದಾಗ ಜಿ ಪಿ ನಂಬರ 819 ರಲ್ಲಿ ನನಗೆ 28 ಅಡಿ ಉದ್ದ ಹಾಗು 14 ಅಡಿ ಅಗಲದ

ಜಾಗ ಬಂದಿತ್ತು, ಅದರಲ್ಲಿ  3 ಅಡಿ ಜಾಗ ಬಿಟ್ಟು ಮನೆ ಕಟ್ಟಲಾಗಿದೆ.  ಅದೇ ದೇವೇಂದ್ರ ಹಾಗೂ ನೇಮು ರವರಿಗೆ ಎಷ್ಟು ಅಳತೆಯ ಜಾಗ ಬಂತು ಎಂದರೆ ನನಗೆ ಗೊತ್ತಿಲ್ಲ. ಗೋಪಾಲ ರವರಿಗೆ 28 ಅಡಿ ಉದ್ದ ಹಾಗೂ 14 ಅಡಿ ಅಗಲದ ಜಾಗ ಬಂದಿರುತ್ತದೆ. ಸದರಿ ವಿಭಾಗದ ಕುರಿತು ಯಾವುದೇ ವಾಟ್ನಿ ಪತ್ರ ಆಗಿರುವುದಿಲ್ಲ ಅದು ಮೌಖಿಕವಾಗಿ ಮಾಡಲಾಗಿತ್ತು.

3. ಈ ದಾವೆ ಹೂಡುವ ಮೊದಲು ನಾವು ಊರಿನ ಪಂಚರನ್ನು ಸೇರಿಸಿದ್ದೆವು ಎಂದರೆ ಸರಿ. ಸದರಿ ಪಂಚರು ಎಂದರೆ ರಾಜು ಬಡವನ್ನವರ, ಮನೋಹರ ಮುಚ್ಚಂಡಿ, ಬಾಹುಬಲಿ ಕಾಮಾಲ, ಬಾಹುಬಲಿ ಪಾಟೀಲ ಹಾಗೂ ರಾಜು ಪಾಟೀಲ ಎಂದರೆ ಸರಿ. ಅವರಲ್ಲಿ 4 ಜನ ಬಸ್ತವಾಡ ಗ್ರಾಮ ಪಂಚಾಯತಿಯ ಸದಸ್ಯರಾಗಿದ್ದರು ಎಂದರೆ ಸರಿ. ಸದರಿ ಪಂಚಾಯತಿಯವರು ಮನೆ ನಂಬರ 495 ಹಾಗೂ 819 ರಲ್ಲಿ ನಮಗೆ ಹಿಸ್ಸೆ ನೀಡಿರುವ ಕಾರಣ ಜಮೀನುಗಳನ್ನು ಪ್ರತಿವಾದಿಯರಿಗೆ ಬಿಟ್ಟ ಕೊಡಬೇಕು ಎಂದು ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ಪಂಚಾಯತಿಯಲ್ಲಿ ನನಗೆ ನನ್ನ ಪಾಲಿನ ಆಸ್ತಿಯನ್ನು ನನಗೆ ಕೊಡಿಸುವುದಾಗಿ  ಹಾಗೂ ನಾನು ದಾವೆ ಹೂಡಬಾರದು ಎಂದು ಹೇಳಿದ್ದರು.  ಆ ರೀತಿ ಯಾವುದೇ ಮಾತುಕತೆ ಆಗಿರಲಿಲ್ಲ, ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಜಿ ಪಿ ನಂಬರ 819 ರ ಮುಂಭಾಗದಲ್ಲಿ ನನ್ನ ಅಂಗಡಿ ಬರುತ್ತದೆ ಎಂದರೆ ಸರಿ. ಸದರಿ ಅಂಗಡಿಯನ್ನು 2011 ರಲ್ಲಿ ಪ್ರಾರಂಭಿಸಲಾಗಿದೆ ಎಂದರೆ ಸಾಕ್ಷಿ 2014 ನೇ ಇಸವಿಯಲ್ಲಿ ಪ್ರಾರಂಭಿಸಲಾಗಿದೆ ಎಂದು ನುಡಿಯುತ್ತಾರೆ. ಅಂಗಡಿ ಪ್ರಾರಂಭಿಸುವಾಗ ನನ್ನ ಸ್ವಂತ ಗಳಿಕೆ ಏನು ಇತ್ತು ಎಂದರೆ ನಾನು ಆಷಾಕಾರ್ಯಕರ್ತೆ ಆಗಿದ್ದೆ ಹಾಗೂ ಅಂಗಡಿ ಹಾಕಲು ನನ್ನ ತಾಯಿ ನನಗೆ ಸಹಾಯ ಮಾಡಿದ್ದರು. ಸದರಿ ಅಂಗಡಿ ನಡೆಸಲು ಪ್ರತಿವಾದಿಯರು ಹಣದ  ಸಹಾಯ  ಮಾಡಿ

ನನ್ನ ಪತಿಗೆ ಆರೋಗ್ಯ ಸರಿಯಿರದ ಕಾರಣ ಅಂಗಡಿಯನ್ನು ಪ್ರಾರಂಭ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪತಿ ಮರಣಹೊಂದುವ ಕಾಲಕ್ಕೆ ಸದರಿ ಅಂಗಡಿಯನ್ನು ನಾನು ಹಾಗೂ ನನ್ನ ಪತಿ ಸೇರಿ ನಡೆಸುತಿದ್ದೇವು ಎಂದರೆ ಸರಿ.

5. ಅಸಲು ದಾವಾ ಸಂಖ್ಯೆ 1026/2022 ರಂತೆ ಪ್ರತಿವಾದಿಯರು ನನ್ನ ಹಾಗೂ ಕಾಕತಕರ ಎಂಬುವವರ ವಿರುದ್ಧ ಹೂಡಿದ್ದರು ಹಾಗೂ ಅದರಲ್ಲಿ ನಾನು ಅಕ್ಟೋಬರ 2025 ರಲ್ಲಿ ತಕರಾರು ಹಾಕಿರುತ್ತೇನೆ ಎಂದರೆ ಸರಿ. ಆಸ್ತಿ ನಂಬರ 495 ನ್ನು ನಾನು ಸುಮಾರು 5 ಲಕ್ಷ ಹಣ ಕೊಟ್ಟು ಖರೀದಿಸಿರುತ್ತೇನೆ. ಸದರಿ 5 ಲಕ್ಷ ಹಣವನ್ನು ನಾನು ಆಸ್ತಿ ನಂಬರ 495 ರ ಮಾಲೀಕರಾದ ಮಾನಿಕ ಸದೆಪ್ಪ ಅಂಗ್ರೊಳಿ ರವರಿಗೆ ಕೊಟ್ಟಿರುತ್ತೇನೆ. ಸದರಿ ಖರೀದಿ ಪತ್ರವನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮಾನಿಕ ಸದೆಪ್ಪ ಅಂಗ್ರೋಳಿ ರವರಿಂದ ಸದರಿ ಆಸ್ತಿಯನ್ನು ಖರೀದಿಸಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಹಾಗೂ ಜಿ ಪಿ ನಂಬರ 819 ರಲ್ಲಿ ಅಂಗಡಿ ತೆರೆಯಬೇಕಾದರೆ ನನ್ನ ಸ್ವಂತ ಗಳಿಕೆ ಎಷ್ಟು ಇತ್ತು ಎಂದರೆ ಸಾಕ್ಷಿ ಅಂಗಡಿ ತೆರೆಯಲು ತನ್ನ ತಾಯಿ ಸಹಾಯ ಮಾಡಿದ್ದು, ನನ್ನ ಸ್ವಂತ ಗಳಿಕೆ ಕುರಿತು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ನನಗೆ ಹಣದ ಸಹಾಯ ಮಾಡಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಮಾನಿಕ ಸದೆಪ್ಪ ಅಂಗ್ರೋಳಿ ರವರಿಗೆ ಹೆಂಡತಿ ಮಕ್ಕಳು ಇರುವುದಿಲ್ಲ ಎಂದರೆ ಸರಿ. ಅವರಿಗೆ ಹತ್ತಿರದ ಸಂಬಂಧಿಕರು ಎಂದರೆ ನಾನು ನನ್ನ ಗಂಡ ಹಾಗೂ ಪ್ರತಿವಾದಿಯರು ಎಂದರೆ ಸರಿ. ನಾನು ಆಸ್ತಿ ನಂಬರ 495 ನ್ನು ಖರೀದಿ ಮಾಡಿರುವುದಿಲ್ಲ ಆದರೂ ಸಹ ಸದರಿ ಮಾನಿಕ ಸದೆಪ್ಪ ಅಂಗ್ರೋಳಿ ರವರ ಆಸ್ತಿ ಮೇಲೆ ಹೇಳಿದ ಅವರ ಹತ್ತಿರದ ಸಂಬಂಧಿಕರಿಗೆ ಹೋಗುತ್ತದೆ ಎಂಬ ಕಾರಣಕ್ಕೆ ನಾನು ಅದನ್ನು ಖರೀದಿ ಮಾಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಆಸ್ತಿ ನಂಬರ 495 ರ ಸ್ವತ್ತನ್ನು ನಾನು ಎಷ್ಟು ಮೊತ್ತಕ್ಕೆ ಮಾರಾಟ ಮಾಡಿರುತ್ತೇನೆ ಎಂದರೆ ಸಾಕ್ಷಿ 6 ಲಕ್ಷಕ್ಕೆ ಎಂದು ನುಡಿಯುತ್ತಾರೆ. ಜಿ ಪಿ ನಂಬರ 819 ಹಾಗೂ 495 ರ ಸ್ವತ್ತುಗಳನ್ನು ನನ್ನ ಪಾಲಿನ ಹಿಸ್ಸೆಗೆ ಪಡೆದ ನಂತರ ನಾನು ಉಳಿದ ಜಮೀನುಗಳನ್ನು ಪ್ರತಿವಾದಿಯರಿಗೆ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪಂಚರು ಸೇರಿದಾಗ ಅದೇ ರೀತಿ ನಾನು ದಾವೆಯನ್ನು ರಾಜಿ ಮಾಡಿಕೊಳ್ಳಬೇಕು ಎಂದು ಹೇಳಿದ್ದರು ಎಂದರೆ ಸರಿ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**